ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003**

ಸಂಖ್ಯೆ: ಸಿ1/ಎಸ್‌ಎಸ್‌ಎಲ್‌ಸಿ/ಶಾ.ಸಂ/34/2021-22 ದಿನಾಂಕ: 30.09.2021

**:: ಸುತ್ತೋಲೆ ::**

**ವಿಷಯ:** ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯಿಂದ ನೂತನ ಶಾಲಾ ಸಂಕೇತ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿರುವ ಬಗ್ಗೆ.

**ಉಲ್ಲೇಖ:**
1. ಈ ಕಚೇರಿ ಸುತ್ತೋಲೆ ಸಂಖ್ಯೆ ಸಿ1/ಎಸ್.ಎಸ್.ಎಲ್.ಸಿ/ಶಾ.ಸಂ/2020/29 /2019-20, ದಿನಾಂಕ 06.08.2019.
2. ಈ ಕಚೇರಿ ಸುತ್ತೋಲೆ ಸಂಖ್ಯೆ ಸಿ1/ಎಸ್.ಎಸ್.ಎಲ್.ಸಿ/ಶಾ.ಸಂ/2021/32 /2020-21, ದಿನಾಂಕ 10.02.2021.

*****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಹೊಸದಾಗಿ ಪ್ರಾರಂಭಗೊಂಡ ಸರ್ಕಾರಿ, ಅನುದಾನಿತ ಮತ್ತು ಮಾನ್ಯತೆ ಪಡೆದ ಅನುದಾನ ರಹಿತ ಶಾಲೆಗಳು, ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ನೋಂದಾಯಿಸಲು ಮತ್ತು ಮಂಡಳಿಯೊಂದಿಗಿನ ಪತ್ರ ವ್ಯವಹಾರಗಳಿಗೆ ಅನುವಾಗುವಂತೆ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ಶಾಲಾ ಸಂಕೇತ ಪಡೆಯುವುದು ಕಡ್ಡಾಯವಾಗಿರುತ್ತದೆ. ಉಲ್ಲೇಖ-1ರ ಸುತ್ತೋಲೆಯಂತೆ ಶಾಲೆಗಳು ಕ್ಷೇತ್ರ ಶಿಕ್ಷಣಾಧಿಕಾರಿಗಳು / ಉಪನಿರ್ದೇಶಕರು (ಆಡಳಿತ)ರವರ ಮುಖೇನ ಪ್ರಸ್ತಾವನೆಗಳನ್ನು ಭೌತಿಕವಾಗಿ ಮಂಡಳಿಗೆ ಸಲ್ಲಿಸಿ ಶಾಲಾ ಸಂಕೇತ ಪಡೆಯಲಾಗುತ್ತಿತ್ತು ಹಾಗೂ ಉಲ್ಲೇಖ-2ರ ಸುತ್ತೋಲೆಯಂತೆ 2020-21ನೇ ಸಾಲಿನಿಂದ ಹೊಸ ಶಾಲಾ ಸಂಕೇತ ಪಡೆಯಲು ಆನ್‌ಲೈನ್‌ನಲ್ಲಿ ಸಹ ಅವಕಾಶ ಕಲ್ಪಿಸಲಾಗಿತ್ತು.

ಮುಂದುವರೆದು, ಹೊಸದಾಗಿ ಪ್ರಾರಂಭಗೊಂಡ ಸರ್ಕಾರಿ, ಅನುದಾನಿತ ಮತ್ತು ಮಾನ್ಯತೆ ಪಡೆದ ಅನುದಾನ ರಹಿತ ಶಾಲೆಗಳ ಮುಖ್ಯ ಶಿಕ್ಷಕರು **ನೂತನ ಶಾಲಾ ಸಂಕೇತ ಪಡೆಯಲು ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ದಿನಾಂಕ: 25.10.2021 ರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದ್ದು, ಇದಕ್ಕೆ ಸಂಬಂಧಿಸಿದ ವಿವರಗಳು ಈ ರೀತಿಯಾಗಿವೆ.**

A) ಶಾಲಾ ಮುಖ್ಯ ಶಿಕ್ಷಕರು ಮಂಡಳಿಯ ವೆಬ್‌ಸೈಟ್ www.sslc.karnataka.gov.in ನ ಮೂಲಕ ನೂತನ ಶಾಲಾ ಸಂಕೇತಕ್ಕಾಗಿ ಅರ್ಜಿ ಸಲ್ಲಿಸಬಹುದಾಗಿದೆ.

www.sslc.karnataka.gov.in → Online Services → SSLC → New School Code

B) ಶಾಲಾ ಮುಖ್ಯ ಶಿಕ್ಷಕರು ನೂತನ ಶಾಲಾ ಸಂಕೇತಕ್ಕೆ ಅರ್ಜಿ ಸಲ್ಲಿಸುವ ಮುನ್ನ ಈ ಕೆಳಕಂಡ ದಾಖಲೆಗಳನ್ನು 500 ಕೆ.ಬಿ ಯಿಂದ 01 ಎಂ.ಬಿಯೊಳಗೆ ಪಿ.ಡಿ.ಎಫ್ ಮಾದರಿ ಸ್ಕ್ಯಾನ್ ಮಾಡಿಟ್ಟುಕೊಳ್ಳುವುದು.

1. ಶಾಲಾ ಮಂಜೂರಾತಿ ಪ್ರತಿ
2. ಶಾಲಾ ಮಾನ್ಯತೆ ನವೀಕರಣದ ಆದೇಶದ ಪ್ರತಿ

C) ಶಾಲಾ ಮುಖ್ಯ ಶಿಕ್ಷಕರು ಆನ್‌ಲೈನ್ ಅರ್ಜಿಯಲ್ಲಿ ಶಾಲಾ ಡೈಸ್‌ಕೋಡ್ (UDISE Code) ನಮೂದಿಸಿದಾಗ ಶಾಲಾ ವಿವರಗಳು ಶಾಲಾ SATS ಲಾಗಿನ್‌ನಲ್ಲಿದ್ದಂತೆ ಶಾಲೆಯ ಹೆಸರು, ವಿಳಾಸ, ಶಾಲೆಯ ವಿಧ, ಬೋಧನಾ ಮಾಧ್ಯಮದ ವಿವರಗಳು ತೆರೆದುಕೊಳ್ಳುತ್ತವೆ. ಈ ವಿವರಗಳಲ್ಲಿ ಯಾವುದೇ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ. ಒಂದು ವೇಳೆ ಈ ವಿವರಗಳಲ್ಲಿ ಏನಾದರೂ ತಪ್ಪುಗಳಿದ್ದು, ತಿದ್ದುಪಡಿ ಮಾಡಲು ಇಚ್ಛಿಸಿದಲ್ಲಿ, ಮೊದಲು ಶಾಲಾ SATS ಲಾಗಿನ್‌ನಲ್ಲಿ ಸರಿಪಡಿಸಿ ನಂತರ ಅರ್ಜಿ ಸಲ್ಲಿಸುವುದು.

D) ಶಾಲಾ SATS ಲಾಗಿನ್‌ನಿಂದ fetch ಆಗುವ ವಿವರಗಳ ಹೊರತಾಗಿ ಮುಖ್ಯ ಶಿಕ್ಷಕರ ಹೆಸರು, ದೂರವಾಣಿ ಸಂಖ್ಯೆ ಮತ್ತು ಇತರ ವಿವರಗಳನ್ನು ನಮೂದಿಸುವುದು. ಅರ್ಜಿ ಸಲ್ಲಿಸಲು OTP Validation ನೀಡಿರುವುದರಿಂದ ಮತ್ತು

ಅರ್ಜಿಗೆ ಸಂಬಂಧಿಸಿದ ಪ್ರಕ್ರಿಯೆ ವಿವರಗಳನ್ನು ಎಸ್.ಎಂ.ಎಸ್ ಮೂಲಕ ಅರ್ಜಿದಾರರಿಗೆ ರವಾನಿಸುವುದರಿಂದ ಚಾಲ್ತಿಯಲ್ಲಿರುವ ಮುಖ್ಯೋಪಾಧ್ಯಾಯರ ದೂರವಾಣಿ ಸಂಖ್ಯೆಯನ್ನೇ ನಮೂದಿಸುವುದು.

E) ಶಾಲೆಗೆ ಸಂಬಂಧಿಸಿದ ವಿವರಗಳನ್ನು ನಮೂದಿಸಿದ ನಂತರ ತಮ್ಮ ದೂರವಾಣಿ ಸಂಖ್ಯೆಗೆ ಬರುವಂತಹ OTPಯನ್ನು ನಮೂದಿಸಿ ಮೇಲೆ ತಿಳಿಸಿರುವ ದಾಖಲೆಗಳನ್ನು ಅಪ್‌ಲೋಡ್ ಮಾಡಿ ಅರ್ಜಿಯನ್ನು Submit ಮಾಡುವುದು.

F) ಅರ್ಜಿಯನ್ನು Submit ಮಾಡಿದ ನಂತರ ನಿಗದಿಪಡಿಸಿರುವ ಶುಲ್ಕವನ್ನು ಆನ್‌ಲೈನ್‌ನಲ್ಲಿಯೇ ಸೃಜಿಸಿಕೊಂಡ ಚಲನ್ ಮೂಲಕ, ಇಲ್ಲವೇ ಆನ್‌ಲೈನ್ ಪೇಮೆಂಟ್ ಮೂಲಕ ಪಾವತಿಸಬಹುದಾಗಿದೆ.

G) ಶಾಲಾ ಮುಖ್ಯ ಶಿಕ್ಷಕರು ನೂತನ ಶಾಲಾ ಸಂಕೇತಕ್ಕಾಗಿ ಅರ್ಜಿ ಸಲ್ಲಿಸಿ, ನಿಗದಿತ ಶುಲ್ಕವನ್ನು ಪಾವತಿಸಿದ ನಂತರ ಅರ್ಜಿಗಳು ಆಯಾ ಜಿಲ್ಲೆಯ EO Loginನಲ್ಲಿ ಲಭ್ಯವಿದ್ದು ಸಂಬಂಧಿಸಿದ ನೋಡಲ್ ಅಧಿಕಾರಿಗಳು ಶಾಲಾ ವಿವರಗಳು ಮತ್ತು ಅಪ್‌ಲೋಡ್ ಮಾಡಿರುವ ದಾಖಲೆಗಳನ್ನು ಪರಿಶೀಲಿಸಿ, ಈ ಬಗ್ಗೆ ಸಂಬಂಧಿಸಿದ ಉಪನಿರ್ದೇಶಕರಿಂದ ಕಡತದಲ್ಲಿ ಅನುಮೋದನೆ ಪಡೆದು, ಎಲ್ಲಾ ದಾಖಲೆಗಳು ಸಮರ್ಪಕವಾಗಿದ್ದಲ್ಲಿ ಅರ್ಜಿಯನ್ನು ಮಂಡಳಿಗೆ Forward ಮಾಡುವುದು. ಇಲ್ಲವಾದಲ್ಲಿ ಸೂಕ್ತ ಕಾರಣಗಳೊಂದಿಗೆ Reject ಮಾಡುವುದು.

H) ಸಂಬಂಧಿಸಿದ ಜಿಲ್ಲಾ EO Login ಮೂಲಕ ಬಂದಂತಹ ಅರ್ಜಿಗಳನ್ನು ಮಂಡಳಿಯಲ್ಲಿ ಈ ಹಿಂದಿನಂತೆ ಪ್ರಕ್ರಿಯೆಗೊಳಿಸಿ ಶಾಲಾ ಸಂಕೇತವನ್ನು ನೀಡಲಾಗುವುದು ಮತ್ತು ಈ ಬಗ್ಗೆ ಅರ್ಜಿದಾರರಿಗೆ ಎಸ್.ಎಂ.ಎಸ್ ಮೂಲಕ ಮಾಹಿತಿ ರವಾನಿಸಲಾಗುವುದು.

ಈ ಮೇಲ್ಕಂಡಂತೆ ಸೂಚಿಸಿದ ರೀತಿಯಲ್ಲಿ ಆನ್‌ಲೈನ್‌ನಲ್ಲಿ ನೂತನ ಶಾಲಾ ಸಂಕೇತಕ್ಕಾಗಿ ಅರ್ಜಿ ಸಲ್ಲಿಸಬಹುದಾಗಿದೆ. 2022ರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಸಂಬಂಧಿಸಿದಂತೆ ಹೊಸದಾಗಿ ಪ್ರಾರಂಭಗೊಂಡ ಸರ್ಕಾರಿ, ಅನುದಾನಿತ ಮತ್ತು ಮಾನ್ಯತೆ ಪಡೆದ ಅನುದಾನ ರಹಿತ ಶಾಲೆಗಳು **ಶಾಲಾ ಸಂಕೇತ ಪಡೆಯಲು ದಿನಾಂಕ 24.11.2021 ಅಂತಿಮ ದಿನಾಂಕವಾಗಿರುತ್ತದೆ. ನೂತನ ಶಾಲಾ ಸಂಕೇತಕ್ಕಾಗಿ ಅರ್ಜಿಗಳನ್ನು ಕಡ್ಡಾಯವಾಗಿ ಆನ್‌ಲೈನ್ ಮೂಲಕವೇ ಸಲ್ಲಿಸಲು ಮತ್ತೊಮ್ಮೆ ತಿಳಿಸಿದೆ.**

(ವಿ.ಸುಮಂಗಲ)
ನಿರ್ದೇಶಕರು (ಪರೀಕ್ಷೆಗಳು)

30/9/21

**ಅಗತ್ಯ ಕ್ರಮಕ್ಕಾಗಿ;**
ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ.

**ಪ್ರತಿಗಳು:**
1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.
2. ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರಗಿ ರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.
3. ಸಹನಿರ್ದೇಶಕರು ಹಾಗೂ ಪದನಿಮಿತ್ತ ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢ ಶಿಕ್ಷಣ ಪ್ರಾದೇಶಿಕ ಪರೀಕ್ಷಾ ಮಂಡಳಿ, ಮೈಸೂರು / ಬೆಳಗಾವಿ / ಕಲಬುರಗಿ ವಿಭಾಗ, ಇವರಿಗೆ ಮಾಹಿತಿಗಾಗಿ.
4. ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು, ರವರಿಗೆ ಮಾಹಿತಿಗಾಗಿ.
5. ಶಾಖಾಧಿಕಾರಿಗಳು, ಗಣಕ ಶಾಖೆ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು, ರವರಿಗೆ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ.
6. ಮಂಡಳಿಯ ಎಲ್ಲಾ ಶಾಖೆಯ ಶಾಖಾಧಿಕಾರಿಗಳಿಗೆ ಮಾಹಿತಿಗಾಗಿ.